ಕರ್ನಾಟಕ ಸರಕಾರ

ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ: 20-1-2015

## ಮಾಧ್ಯಮದವರ ಗಮನಕ್ಕೆ

ಜನವರಿ 26 ರ ಗಣರಾಜ್ಯೋತ್ಸವದ ಅಂಗವಾಗಿ ರಾಜ್ಯಪಾಲರು ರಾಜಭವನದಲ್ಲಿ ಸಂಜೆ 5.00 ಗಂಟೆಗೆ ಏರ್ಪಡಿಸಿರುವ ಚಹಾ ಕೂಟದ ವರದಿಗಾಗಿ ಆಗಮಿಸುವ ಮಾನ್ಯತೆ ಪಡೆದ ಮಾಧ್ಯಮ ಪ್ರತಿನಿಧಿಗಳು **ಜನವರಿ 20 ರಿಂದ ಜನವರಿ 24** ರವರೆಗೆ ಕಛೇರಿ ವೇಳೆಯಲ್ಲಿ ಸುದ್ದಿ ಮತ್ತು ಪತ್ರಿಕಾ ಶಾಖೆಯಿಂದ ಆಹ್ವಾನ ಪತ್ರಿಕೆಯನ್ನು ಪಡೆದುಕೊಳ್ಳಬಹುದಾಗಿದೆ.

## ಮಾಧ್ಯಮದವರ ಗಮನಕ್ಕೆ

ಫೆಬ್ರವರಿ 2 ರಿಂದ 13 ರವರೆಗೆ ನಡೆಯಲಿರುವ 14 ನೇ ವಿಧಾನ ಸಭೆಯ ಆರನೇ ಅಧಿವೇಶನದ ಕಲಾಪಗಳನ್ನು ವರದಿ ಮಾಡಲು ಮಾಧ್ಯಮ ಪ್ರತಿನಿಧಿಗಳಿಗೆ ಸ್ಮಾರ್ಟ್‌ಕಾರ್ಡ್ ಮಾದರಿಯಲ್ಲಿ ಪತ್ರಕರ್ತರ ವೇದಿಕೆ ಪಾಸುಗಳನ್ನು ಸಚಿವಾಲಯದಿಂದ ವಿತರಿಸಲು ತೀರ್ಮಾನಿಸಲಾಗಿದೆ.

ಈ ಸಂಬಂಧ ಶಾಸನ ಸಭೆಯ ನಡವಳಿಗಳನ್ನು ವರದಿ ಮಾಡುವ ಬೆಂಗಳೂರು ಆವೃತ್ತಿಯ ಪ್ರಮುಖ ದಿನ ಪತ್ರಿಕೆಗಳ ಹಾಗೂ ಪ್ರಮುಖ ಸುದ್ದಿ ವಾಹಿನಿಗಳ ವರದಿಗಾರರ ಹೆಸರು ಮತ್ತು ಸುದ್ದಿ ಸಂಸ್ಥೆಯ ವಿವರಗಳುಳ್ಳ ಪಟ್ಟಿ ಹಾಗೂ ಅವರುಗಳ ಪಾಸ್‌ಪೋರ್ಟ್ ಅಳತೆಯ 2 ಫೋಟೋಗಳನ್ನು ***ಜನವರಿ 23 ರೊಳಗಾಗಿ*** ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಸಲ್ಲಿಸಲು ಸೂಚಿಸಿದೆ.

# ಪತ್ರಿಕಾ ಪ್ರಕಟಣೆ

## <u>ಉತ್ತಮ ಆರೋಗ್ಯದಿಂದ ಸಮಾಜದಲ್ಲಿ ಬದಲಾವಣೆ ಕಾಣಲು ಸಾಧ್ಯ</u>

ಬೆಂಗಳೂರು, ಜನವರಿ 20 (ಕರ್ನಾಟಕ ವಾರ್ತೆ)

ಉತ್ತಮ ಆರೋಗ್ಯದಿಂದ ಸಮಾಜದಲ್ಲಿ ಬದಲಾವಣೆಯನ್ನು ಕಾಣಲು ಸಾಧ್ಯವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿಪ್ರಾಯಪಟ್ಟರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ವತಿಯಿಂದ ಇಂದು ಸಂಜೆ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಎಪಿಎಲ್ ಕಾರ್ಡುದಾರರಿಗೆ ರಾಜೀವ್ ಆರೋಗ್ಯ ಭಾಗ್ಯ ಹಾಗೂ ಸರ್ಕಾರಿ ನೌಕರರಿಗೆ ಜ್ಯೋತಿ ಸಂಜೀವಿನಿ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು ರಾಜ್ಯದ ಎಲ್ಲ ವರ್ಗದವರಿಗೂ ಹೈಟೆಕ್ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯವನ್ನು ದೊರಕಿಸಿಕೊಡುವುದು ಸರ್ಕಾರದ ಪ್ರಮುಖ ಉದ್ದೇಶವಾಗಿದೆ ಎಂದರು.

ಇದುವರೆವಿಗೂ ಬಿಪಿಎಲ್ ಕಾರ್ಡು ಹೊಂದಿರುವವರಿಗೆ ವಾಜಪೇಯಿ ಆರೋಗ್ಯಶ್ರೀ ಯೋಜನೆಯಡಿ ಉಚಿತ ಚಿಕಿತ್ಸೆಯನ್ನು ನೀಡಲಾಗುತ್ತಿತ್ತು ಅದನ್ನು ಎಪಿಎಲ್ ಕಾರ್ಡುದಾರರಿಗೂ ವಿಸ್ತರಿಸುವ ಮೂಲಕ "ರಾಜೀವ್ ಆರೋಗ್ಯ ಭಾಗ್ಯ" ಹಾಗೂ ಸರ್ಕಾರಿ ನೌಕರರಿಗೆ "ಜ್ಯೋತಿ ಸಂಜೀವಿನಿ" ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ ಎಂದರು.

ಆರೋಗ್ಯ ವಿಮೆ ಸೇವೆಯನ್ನು ಜಾರಿಗೊಳಿಸಿರುವ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಮೊದಲ ರಾಜ್ಯವೆಂಬ ಹೆಗ್ಗಳಿಕೆಯನ್ನು ಪಡೆದಿದೆಯಲ್ಲದೆ ನಮ್ಮ ಸರ್ಕಾರವು ಬಜೆಟ್‌ನಲ್ಲಿ ಘೋಷಿಸಿದಂತೆ ಈ ಯೋಜನೆಗೆ ಇಂದು ಚಾಲನೆ ನೀಡಲಾಗಿದೆ. ಜ್ಯೋತಿ ಸಂಜೀವಿನಿಗೆ 110 ಹಾಗೂ ರಾಜೀವ್ ಆರೋಗ್ಯ ಭಾಗ್ಯ ಯೋಜನೆಗೆ 100 ಖಾಸಗಿ ಆಸ್ಪತ್ರೆಗಳು ಈಗಾಗಲೇ ನೊಂದಾಯಿಸಿಕೊಂಡಿವೆ ಎಂದು ತಿಳಿಸಿದರು.

ಕೆಲವು ರೋಗಗಳು ಶ್ರೀಮಂತರಿಗೆ ಮಾತ್ರ ಬರುತ್ತದೆ ಎನ್ನುತ್ತಿದ್ದರು. ಆದರೆ ಈ ಎಲ್ಲಾ ರೋಗಗಳು ಬಡವರಿಗೂ ಬರುತ್ತಿದೆ. ಶ್ರೀಮಂತರಾದರೆ ಹೆಚ್ಚಿನ ಹಣ ನೀಡಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಾರೆ. ಆದರೆ ಬಡವರಿಗೆ ಇದು ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರವು ಈ ಯೋಜನೆಯನ್ನು ಜಾರಿಗೆ ತಂದಿದೆ ಎಂದರು.

ಸರ್ಕಾರಿ ಆಸ್ಪತ್ರೆಗಳಿಗೆ ಅಧುನಿಕ ವೈದ್ಯಕೀಯ ಸಲಕರಣೆಗಳನ್ನು ನೀಡುವ ಜೊತೆಗೆ ದಕ್ಷ ವೈದ್ಯರನ್ನು ನೇಮಿಸಲಾಗಿದ್ದರೂ ಜನರು ಸರ್ಕಾರಿ ಆಸ್ಪತ್ರೆಗಳಿಗೆ ಹೋಗುತ್ತಿಲ್ಲ. ಗ್ರಾಮೀಣ ಜನರೂ ಕೂಡ ಖಾಸಗಿ ಆಸ್ಪತ್ರೆಗಳಿಗೆ ಆಕರ್ಷಿತರಾಗುತ್ತಿದ್ದಾರೆ. ಜನರು ಖಾಸಗಿ ಆಸ್ಪತ್ರೆಗಳ ವ್ಯಾಮೋಹವನ್ನು ತೊರೆದು ಸರ್ಕಾರಿ ಆಸ್ಪತ್ರೆಗಳಿಗೆ ಹೋಗುವ ಮನೋಭಾವವನ್ನು ಬೆಳೆಸಿಕೊಳ್ಳಬೇಕಂದರು.

ಮುಖ್ಯಮಂತ್ರಿಯವರ ಪರಿಹಾರ ನಿಧಿಯಡಿ ಪ್ರತಿ ವರ್ಷಕ್ಕೆ ರೂ. 100 ಕೋಟಿಗೂ ಹೆಚ್ಚಿನ ಹಣ ಅನಾರೋಗ್ಯ ಪೀಡಿತರಿಗಾಗಿ ಖರ್ಚಾಗುತ್ತಿದೆ ಎಂದ ಮುಖ್ಯಮಂತ್ರಿಯವರು ನಿವೃತ್ತ ಸರ್ಕಾರಿ ನೌಕರರಿಗೆ

ಹಾಗೂ ಮಾಧ್ಯಮ ಪ್ರತಿನಿಧಿಗಳಿಗೂ ಆರೋಗ್ಯ ವಿಮೆ ಸೌಲಭ್ಯವನ್ನು ಜಾರಿಗೊಳಿಸಲು ಪರಿಶೀಲಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಈ ನೂತನ ಯೋಜನೆಯಾದ ಜ್ಯೋತಿ ಸಂಜೀವಿನಿ ಕೈಪಿಡಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಯು.ಟಿ. ಖಾದರ್ ಅವರು ಕರ್ನಾಟಕ ಸರ್ಕಾರವು ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಿ ಹೆಜ್ಜೆಯನ್ನು ಇಟ್ಟಿದ್ದು. ಆರೋಗ್ಯ ವಿಮೆಯನ್ನು ಎಲ್ಲಾ ವರ್ಗದ ಜನರಿಗೆ ಸಿಗುವಂತೆ ಮಾಡಿದೆಯಲ್ಲದೆ, ಕರ್ನಾಟಕದ ರಾಜ್ಯದೊಳಗೆ ಅಪಘಾತವಾಗಿ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗುವ ವ್ಯಕ್ತಿಯ ವೈದ್ಯಕೀಯ ವೆಚ್ಚಕ್ಕಾಗಿ ಸರ್ಕಾರದಿಂದ 25,000 ರೂ. ಬಿಡುಗಡೆ ಮಾಡುವಂತಹ ಯೋಜನೆಯಾದ "ಮುಖ್ಯಮಂತ್ರಿ ಸಾಂತ್ವಾನ ಯೋಜನೆ" ಯನ್ನು ಸಹ ಶೀಘ್ರದಲ್ಲಿಯೇ ಜಾರಿಗೆ ತರಲಾಗುವುದೆಂದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ: ಶರಣ ಪ್ರಕಾಶ್ ಆರ್. ಪಾಟೀಲ್ ಅವರು ರಾಜೀವ್ ಆರೋಗ್ಯ ಭಾಗ್ಯ ಕೈಪಿಡಿಯನ್ನು ಬಿಡುಗಡೆ ಮಾಡಿದರು. ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಹಜ್ ಸಚಿವ ಆರ್. ರೋಷನ್ ಬೇಗ್ ಅವರು ಅಧ್ಯಕ್ಷತೆ ವಹಿಸಿದ್ದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀ ಎನ್. ಶಿವಶೈಲಂ, ಆಯುಕ್ತ ಪಿ.ಎಸ್. ವಸ್ತ್ರದ್, ರಾಷ್ಟ್ರೀಯ ಆರೋಗ್ಯ ಅಭಿಯಾನ ನಿರ್ದೇಶಕರಾದ ಅತುಲ್‌ಕುಮಾರ್ ತಿವಾರಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಕಾರ್ಯಕಾರಿ ನಿರ್ದೇಶಕರಾದ ಡಾ: ಪಿ. ಬೋರೇಗೌಡ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಮಂಜೇಗೌಡ ಸೇರಿದಂತೆ ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು.

ರಾಜ್ಯದಲ್ಲಿ ಎಲ್ಲರಿಗೂ ಆರೋಗ್ಯ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಎ.ಪಿ.ಎಲ್. ಕುಟುಂಬ ಸದಸ್ಯರಿಗೆ ನೋಂದಾಯಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ದುಬಾರಿ ವೆಚ್ಚದ ಪ್ರಮುಖ 7 ಮಾರಣಾಂತಿಕ ಖಾಯಿಲೆಗಳಾದ ಹೃದಯರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡದ ಖಾಯಿಲೆ, ಅಪಘಾತ, ಸುಟ್ಟಗಾಯ, ನವಜಾತ ಶಿಶುಗಳಿಗೆ ಸಂಬಂಧಿಸಿದ ಗಂಭೀರ ಖಾಯಿಲೆಗಳಿಗೆ ಸಂಬಂಧಿಸಿದ 449 ಬಗೆಯ ಶಸ್ತ್ರ ಚಿಕಿತ್ಸೆಗಳನ್ನು ರಾಜೀವ್ ಆರೋಗ್ಯ ಭಾಗ್ಯ ಯೋಜನೆಯಡಿ ಅದೇ ರೀತಿ ಸರ್ಕಾರಿ ನೌಕರ ಹಾಗೂ ಅವರ ಕುಟುಂಬದ ಸದಸ್ಯರಿಗೆ ಜ್ಯೋತಿ ಸಂಜೀವಿನಿ ಯೋಜನೆಯಡಿ ಉಚಿತ ಚಿಕಿತ್ಸೆಯನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

## ವಿಧಾನ ಸಭೆ ಅಧಿವೇಶನ

ಬೆಂಗಳೂರು, ಜನವರಿ 20 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಸಭೆಯ ಆರನೇ ಅಧಿವೇಶನವು 2015 ರ ಫೆಬ್ರವರಿ 2 ರ ಸೋಮವಾರ ಮಧ್ಯಾಹ್ನ 12-00 ಗಂಟೆಗೆ ಬೆಂಗಳೂರಿನ ವಿಧಾನ ಸೌಧಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸಮಾವೇಶಗೊಳ್ಳಲಿದೆ. ಅಂದು ಮಧ್ಯಾಹ್ನ 12-00 ಗಂಟೆಗೆ ರಾಜ್ಯಪಾಲರು ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡುವರು. ಫೆಬ್ರವರಿ 3 ರಿಂದ 13 ರವರೆಗೆ ಸರ್ಕಾರಿ ಮತ್ತು ಖಾಸಗಿ ಕಾರ್ಯಕಲಾಪಗಳು ನಡೆಯಲಿದ್ದು ಫೆಬ್ರವರಿ 7 ರಂದು ಶನಿವಾರ ಕಾರ್ಯಕಲಾಪಗಳು ಇರುವುದಿಲ್ಲ. ಫೆಬ್ರವರಿ 8 ರಂದು ಭಾನುವಾರ ಸಾರ್ವತ್ರಿಕ ರಜೆ ಇರುತ್ತದೆ ಎಂದು ಕರ್ನಾಟಕ ವಿಧಾನ ಸಭೆಯ ಕಾರ್ಯದರ್ಶಿ ಶ್ರೀ ಓಂಪ್ರಕಾಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬು/ಕೆಎಂ

## ಬಳ್ಳಾರಿ ಅಭಿವೃದ್ಧಿಗೆ 204 ಕೋಟಿ ರೂ. ವಿಶೇಷ ಪ್ಯಾಕೇಜ್

ಬೆಂಗಳೂರು, ಜನವರಿ 20 (ಕರ್ನಾಟಕ ವಾರ್ತೆ)

ಬಳ್ಳಾರಿ ವಿಧಾನ ಸಭಾ ಕ್ಷೇತ್ರದ ಅಭಿವೃದ್ಧಿಗೆ ಈ ಹಿಂದೆ ಘೋಷಣೆ ಮಾಡಿದ್ದ 204 ಕೋಟಿ ರೂ. ಮೊತ್ತದ ವಿಶೇಷ ಪ್ಯಾಕೇಜ್‌ನ್ನು ಫೆಬ್ರವರಿ ಮೊದಲ ವಾರದಲ್ಲಿ ಬಿಡುಗಡೆ ಮಾಡಲಾಗುವುದು. ಫಲಾನುಭವಿಗಳಿಗೆ ಅಂದೇ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಒದಗಿಸಲಾಗುವುದೆಂದು ರಾಜ್ಯ ಸಮಾಜ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರು ಪ್ರಕಟಿಸಿದರು.

ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ 35.50 ಕೋಟಿ ಸಾಲ ಮಂಜೂರಾತಿ, 538 ಪರಿ.ಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿ ಸಣ್ಣ ರೈತರಿಗೆ ಕೊಳವೆ ಭಾವಿ ಮಂಜೂರಾತಿ ಪತ್ರ ನೀಡಲಾಗುವುದೆಂದು ಅವರು ತಿಳಿಸಿದರು. ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಪಂಗಡದ 7708 ಫಲಾನುಭವಿಗಳಿಗೆ 26.87 ಕೋಟಿ ರೂ.ಗಳನ್ನು ಫಲಾನುಭವಿಗಳಿಗೆ ನೀಡಲಾಗುವುದು ಎಂದರು. ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುರಾರ್ಜಿ ವಸತಿ ಶಾಲೆಗಳ ನಿರ್ಮಾಣ 105 ಕೋಟಿ ರೂ. ವೆಚ್ಚದಲ್ಲಿ ಮಾಡಲಾಗುವುದು. ದೇವರಾಜು ಅರಸು ಅಭಿವೃದ್ಧಿ ನಿಗಮದಿಂದ 827 ಫಲಾನುಭವಿಗಳಿಗೆ 5.50 ಕೋಟಿ ರೂ. ವೆಚ್ಚದಲ್ಲಿ ಗಂಗಾ ಕಲ್ಯಾಣ ಹಾಗೂ ಇತರೆ ಯೋಜನೆಗಳಿಗೆ ಮಂಜೂರಾತಿ ನೀಡಲಾಗುವುದೆಂದರು. ಕ್ಷೇತ್ರದಲ್ಲಿ 18 ವಾಲ್ಮೀಕಿ ಭವನ 22 ಅಂಬೇಡ್ಕರ್ ಭವನ ಹಾಗೂ ಜಗಜೀವನ್‌ರಾಂ ಭವನಗಳನ್ನು ನಿರ್ಮಿಸಲಾಗುವುದೆಂದರು. ಈ ತಿಂಗಳ 31 ರಂದು ವಿರಾಜಪೇಟೆಯ ಜೇನು ಕುರುಬರ ಬುಡಕಟ್ಟಿನ ಜನರ ಮನೆಯಲ್ಲಿ ವಾಸ್ತವ್ಯ ಮಾಡುವುದಾಗಿ ಸಚಿವರು ಪ್ರಕಟಿಸಿದರು.

## ಆಯುಷ್ ಆರೋಗ್ಯ ಮೇಳ

ಬೆಂಗಳೂರು, ಜನವರಿ 20 (ಕರ್ನಾಟಕ ವಾರ್ತೆ)

ಬರುವ 21 ರಿಂದ 24 ರವರೆಗೆ ರಾಜ್ಯದಲ್ಲಿ ಅಖಿಲ ಭಾರತ ಮಟ್ಟದ ಆಯುಷ್ ಆರೋಗ್ಯ ಮೇಳವನ್ನು ಬೆಂಗಳೂರಿನ ಆರ್.ಬಿ.ಎನ್.ಎಂ.ಎಸ್. ಮೈದಾನದಲ್ಲಿ ಏರ್ಪಡಿಸಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಶ್ರೀ ಯು.ಟಿ. ಖಾದರ್ ಅವರು ತಿಳಿಸಿದರು.

## ಸಚಿವ ಸಂಪುಟ ಸಭೆ

ಬೆಂಗಳೂರು, ಜನವರಿ 20 (ಕರ್ನಾಟಕ ವಾರ್ತೆ)

ರಾಜ್ಯ ಸಚಿವ ಸಂಪುಟದ ಸಭೆಯು ಜನವರಿ 21 ರಂದು ಮಧ್ಯಾಹ್ನ 3.30 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಂಗಣದಲ್ಲಿ ನಡೆಯಲಿದೆ.

ಬಾಬು/ಸೌಮ್ಯ/ಕೆಎಂ

## ಪಂಪ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷರ ನೇಮಕ

**ಬೆಂಗಳೂರು, ಜನವರಿ 20 (ಕರ್ನಾಟಕ ವಾರ್ತೆ)**

**ಹಿರಿಯ ಸಾಹಿತಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲದ ಶ್ರೀ ವಿಷ್ಣುನಾಯಕ್ ಅವರನ್ನು ಪಂಪ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷರನ್ನಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.**
ಬಾಬು/ಕೆಎಂ

## ಮೊಬೈಲ್ ಅಪ್ಲಿಕೇಷನ್ ಮೂಲಕ ಆಡಳಿತ [E- Governance through Mobile Apps]

**ಬೆಂಗಳೂರು, ಜನವರಿ 20 (ಕರ್ನಾಟಕ ವಾರ್ತೆ)**

ರಾಜ್ಯ ಸರ್ಕಾರವು ರಾಜ್ಯದ ಮುಖ್ಯ ರಸ್ತೆ ಸಂಪರ್ಕ ಜಾಲದ 10500 ಕಿ.ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿ/ ಸುಧಾರಣೆ ಮಾಡುವ ಸಲುವಾಗಿ ಯೋಜನೆಯನ್ನು ಅನುಮೋದಿಸಿದ್ದು, ಈ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ಲಭ್ಯವಿರುವ ಉಪಕರಣವನ್ನು (Available machinery) ಉಪಯೋಗಿಸಿಕೊಂಡು, ಕೈಗೊಳ್ಳುವ ಬಗ್ಗೆ ಯೋಜಿಸಿ 2 ವರ್ಷಗಳಲ್ಲಿ ಪೂರ್ಣಗೊಳಿಸುವ ಬಗ್ಗೆ ಕಾರ್ಯ ರೂಪಿಸಿರುತ್ತದೆ. ಈ ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳನ್ನು ಯೋಜನಾ ರೂಪದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಮೊದಲನೇ ಹಂತದಲ್ಲಿ 3724.41 ಕಿ.ಮೀಗಳನ್ನು ಮತ್ತು ಎರಡನೇ ಹಂತದಲ್ಲಿ 3745 ಕಿ.ಮೀಗಳನ್ನು ಅಭಿವೃದ್ಧಿಗೊಳಿಸಲು ಅನುಮೋದನೆಯಾಗಿದೆ. ಮೊದಲನೇ ಹಂತದ 66 ಪ್ಯಾಕೇಜ್‌ಗಳಲ್ಲಿ 56 ಪ್ಯಾಕೇಜ್‌ನ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, 10 ಪ್ಯಾಕೇಜ್‌ನ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. 2012–13 ನೇ ಸಾಲಿನಲ್ಲಿ 1438 ಕಿ.ಮೀ ಉದ್ದದ (ಸುಧಾರಣೆ– 828 ಕಿ.ಮೀ ಹಾಗೂ ನವೀಕರಣದ–610 ಕಿ.ಮೀ) ರಸ್ತೆಯನ್ನು ರೂ. 519.56 ಕೋಟಿ ಮೊತ್ತದಲ್ಲಿ ಪೂರ್ಣಗೊಳಿಸಲಾಗಿದೆ. 2013–14 ನೇ ಸಾಲಿನಲ್ಲಿ 1391 ಕಿ.ಮೀ ಉದ್ದದ (ಸುಧಾರಣೆ– 913 ಕಿ.ಮೀ ಹಾಗೂ ನವೀಕರಣದ–477 ಕಿ.ಮೀ) ರಸ್ತೆಯನ್ನು ರೂ. 770.58 ಕೋಟಿ ಮೊತ್ತದಲ್ಲಿ ಪೂರ್ಣಗೊಳಿಸಲಾಗಿದೆ. 2014–15 ನೇ ಸಾಲಿನಲ್ಲಿ 24 ರ ಅಕ್ಟೋಬರ್ 2014ರ ಅಂತ್ಯಕ್ಕೆ 388.56 ಕಿ.ಮೀ ಉದ್ದದ (ಸುಧಾರಣೆ– 128.56 ಕಿ.ಮೀ ಹಾಗೂ ನವೀಕರಣದ–260 ಕಿ.ಮೀ) ರಸ್ತೆಯನ್ನು ರೂ. 114.61 ಕೋಟಿ ಮೊತ್ತದಲ್ಲಿ ಪೂರ್ಣಗೊಳಿಸಲಾಗಿದೆ. ಒಟ್ಟಾರೆಯಾಗಿ 3200 ಕಿ.ಮೀ ಉದ್ದದ (ಸುಧಾರಣೆ– 2040 ಕಿ.ಮೀ ಹಾಗೂ ನವೀಕರಣದ–1160 ಕಿ.ಮೀ) ರಸ್ತೆಯನ್ನು ರೂ. 1404.75 ಕೋಟಿ ಮೊತ್ತದಲ್ಲಿ ಪೂರ್ಣಗೊಳಿಸಲಾಗಿದೆ. ಎರಡನೇ ಹಂತದ 70 ಪ್ಯಾಕೇಜ್‌ಗಳಲ್ಲಿ 10 ಪ್ಯಾಕೇಜ್‌ಗಳ ಕಾಮಗಾರಿ ಪೂರ್ಣಗೊಂಡಿದೆ. ಇಲ್ಲಿಯವರೆಗೆ 1800 ಕಿ.ಮೀ ರಸ್ತೆಯ ಉದ್ದವನ್ನು ಅಭಿವೃದ್ಧಿ ಪಡಿಸಲಾಗಿದೆ. ಒಟ್ಟಾರೆಯಾಗಿ 5000 ಕಿ.ಮೀ ಗಳನ್ನು ಇಲ್ಲಿಯವರೆಗೆ ಅಭಿವೃದ್ಧಿಗೊಳಿಸಲಾಗಿದೆ.

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯನ್ನು ಸಮರ್ಪಕವಾಗಿ ನಿಯೋಜಿತ ಸಮಯದೊಳಗೆ ಉತ್ತಮ ಗುಣಮಟ್ಟವನ್ನು ಕಾಪಾಡಿಕೊಂಡು ಕಾರ್ಯಗತಗೊಳಿಸಲು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (PMS)ನ್ನು ಅಳವಡಿಸಲಾಗಿದೆ. ಆಧುನಿಕ ಮಾಹಿತಿ ತಂತ್ರಜ್ಞಾನದ ಮೂಲಕ ರಸ್ತೆಯ ನಿರ್ಮಾಣ,

ಉಸ್ತುವಾರಿ, ಗುಣ ನಿಯಂತ್ರಣದ ಪರೀಕ್ಷೆಗಳು, ದಿನ ನಿತ್ಯದ ಚಟುವಟಿಕೆಗಳು, ಛಾಯಚಿತ್ರಗಳನ್ನು ಕಾಮಗಾರಿ ನಡೆಯುವ ಸ್ಥಳದಿಂದ ಮೊಬೈಲ್ ಅಪ್ಲಿಕೇಷನ್ ಮೂಲಕ ಅಪ್‌ಲೋಡ್ ಮಾಡಿ ಮೇಲ್ವಿಚಾರಣೆ ಮಾಡಬಹುದಾಗಿದೆ. ಈ ತಂತ್ರಜ್ಞಾನವು ಎಲ್ಲಾ Android Mobile ಗಳಲ್ಲಿ Google Play ಮೂಲಕ ಡೌನ್‌ಲೋಡ್ ಮಾಡಿಕೊಂಡು ವೀಕ್ಷಿಸಬಹುದು. ರಾಜ್ಯ ಯಾವುದೇ ಮೂಲೆಯಿಂದ ಮಾಹಿತಿಯನ್ನು ತಕ್ಷಣ ಪಡೆದು ಕಾಮಗಾರಿಯನ್ನು ನಿಯಂತ್ರಿಸಬಹುದು. ರಸ್ತೆಯ ನಕ್ಷೆ ಮತ್ತು ತಾಂತ್ರಿಕ ವಿಶ್ಲೇಷಣೆಯನ್ನು Mobile Apps ಮೂಲಕ ಮಾಡಬಹುದಾಗಿದೆ. ರಸ್ತೆ ನಿರ್ಮಾಣದಲ್ಲಿ ಇದು ಒಂದು ಕ್ರಾಂತಿಕಾರಿ ಬೆಳವಣಿಗೆಯಾಗಿದ್ದು ಇಲ್ಲಿಯವರೆಗೆ ಸುಮಾರು 5000 ಕಿ.ಮೀ ಗಳನ್ನು ಯಶಸ್ವಿಯಾಗಿ ಕೇವಲ ಎರಡು ವರ್ಷಗಳ ಅವಧಿಯಲ್ಲಿ ಅಭಿವೃದ್ಧಿ ಮಾಡಲಾಗಿದೆ.

ಕೇಂದ್ರ ಸರ್ಕಾರವೂ ನೂತನ ತಂತ್ರಜ್ಞಾನ ಬಳಸಿ ಕಾರ್ಯನಿರ್ವಹಿಸುತ್ತಿರುವ ಯೋಜನೆಗಳನ್ನು ವಿಶ್ಲೇಷಣೆ ಮಾಡಿ ರಾಷ್ಟ್ರ ಪ್ರಶಸ್ತಿ ನೀಡಲು ದಿನಾಂಕ:21–07–2014 ರಂದು ಆಹ್ವಾನ ನೀಡಿತ್ತು. ರಾಷ್ಟ್ರದ ಎಲ್ಲಾ ಮೂಲೆಗಳಿಂದ ವಿಧ ವಿಧವಾದ ತಂತ್ರಜ್ಞಾನ ಬಳಸಿ ನಿರ್ವಹಿಸುತ್ತಿರುವ ಯೋಜನೆಗಳ ಬಗ್ಗೆ ನವದೆಹಲಿಯಲ್ಲಿ ಆಡಳಿತ ಮತ್ತು ಸುಧಾರಣೆ ಇಲಾಖೆ, ಮಾಹಿತಿ ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರದವರು Power Point Presentation ನೀಡಲು ಆಹ್ವಾನ ನೀಡಿತ್ತು. ದಿನಾಂಕ:22-12-2014 ರಂದು ಲೋಕೋಪಯೋಗಿ ಇಲಾಖೆಯಡಿಯಲ್ಲಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ರಸ್ತೆಗಳ ಉಸ್ತುವಾರಿಯನ್ನು ಮಾಡಲು ಬಳಸುತ್ತಿರುವ E- Governance through Mobile Apps ಬಗ್ಗೆ ನವದೆಹಲಿಯಲ್ಲಿ Presentation ನೀಡಲಾಯ್ತು. ಈ ಮೊಬೈಲ್ ಆಪ್ಸ್ ಮೂಲಕ ಕಾಮಗಾರಿಯ ಉಸ್ತುವಾರಿ ಮತ್ತು ನಿರ್ವಹಣೆಯ ಯೋಜನೆಯನ್ನು ಭಾರತ ಸರ್ಕಾರದ ಆಡಳಿತ ಮತ್ತು ಸುಧಾರಣೆ ಇಲಾಖೆ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ರವರು ದೇಶದ ಅತ್ಯುತ್ತಮವಾದ ತಂತ್ರಜ್ಞಾನ ಉಪಯೋಗಿಸಿಕೊಳ್ಳುತ್ತಿರುವ ಯೋಜನೆ ಎಂದು ಪರಿಗಣಿಸಿ ಮೊದಲನೇ ಬಹುಮಾನವನ್ನು ನೀಡಿದೆ. ದಿನಾಂಕ: 30–01–2015 ರಂದು ಗಾಂಧಿನಗರ, ಗುಜರಾತ್ ರಾಜ್ಯದಲ್ಲಿ ಪ್ರಶಸ್ತಿ ಸಮಾರಂಭವನ್ನು ಚಿನ್ನದ ಪದಕ ನೀಡಿ ಸನ್ಮಾನ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ, ಗುಜರಾತ್ ಸರ್ಕಾರ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ ಸಮಯೋಜನೆಯೊಂದಿಗೆ ಹಮ್ಮಿಕೊಂಡಿದೆ. ರಾಜ್ಯಕ್ಕೆ ರಸ್ತೆಗಳ ಉಸ್ತುವಾರಿ ಮತ್ತು ಮೇಲ್ವಚಾರಣೆಗಾಗಿ ರೂಪಿಸಿರುವ ಈ ತಂತ್ರಜ್ಞಾನಕ್ಕೆ ದೊರಕಿರುವ ಪ್ರಶಸ್ತಿಯು ರಾಜ್ಯ ರಸ್ತೆ ಅಭಿವೃದ್ಧಿ ಯೋಜನೆಯ ಆಂದೋಲನವಾಗಿದೆ. ಈ ಪ್ರಶಸ್ತಿಯಿಂದ ಉತ್ತೇಜನಕಾರಿಯಾಗಿ ಉತ್ತಮ ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಪೂರೈಸಲು ಅನುಕೂಲವಾಗುತ್ತಿದೆ.
ಬಾಬು/ಸೌಮ್ಯ/ಕೆಎಂ

# ಸಾರಿಗೆ ಕಚೇರಿ: ಆನ್‌ಲೈನ್ ಸೇವೆ

**ಬೆಂಗಳೂರು, ಜನವರಿ 20 (ಕರ್ನಾಟಕ ವಾರ್ತೆ)**

2014–15ನೇ ಸಾಲಿನ ರಾಜ್ಯದ ಬಜೆಟ್‌ನ ಪ್ಯಾರಾ ಸಂಖ್ಯೆ: 454ರಲ್ಲಿ " ಒಂದಕ್ಕಿಂತ ಹೆಚ್ಚು ಪ್ರಾದೇಶಿಕ ಸಾರಿಗೆ ಕಛೇರಿಗಳಿರುವ ಜಿಲ್ಲೆಗಳಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಾಹನಗಳ ನೋಂದಣಿ, ಕಲಿಕೆ ಮತ್ತು ಚಾಲನಾ ಅನುಜ್ಞಾ ಪತ್ರಗಳನ್ನು ಯಾವುದೇ ಕಛೇರಿಗಳಲ್ಲಿ ಅರ್ಜಿ ಸ್ವೀಕರಿಸಿ ಕಾರ್ಯ ನಿರ್ವಹಿಸಲು ಮತ್ತು ಈ ಎಲ್ಲಾ ಸೇವೆಗಳನ್ನು ಆನ್‌ಲೈನ್ ಮುಖಾಂತರ ನೀಡಲು ಉದ್ದೇಶಿಸಿದೆ"

ಎಂದು ಘೋಷಿಸಲಾಗಿದೆ, ಸದರಿ ಆನ್‌ಲೈನ್ ಸೇವೆಗಳನ್ನು ಅಕ್ಟೋಬರ್–2013 ರಿಂದ ಅನುಷ್ಠಾನಗೊಳಿಸಲಾಗಿರುವ ಬೆಂಗಳೂರಿನ ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ, ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚು ಪ್ರಾದೇಶಿಕ/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳಿರುವ ಹನ್ನೆರಡು (12) ಜಿಲ್ಲೆಗಳಾದ (1) ಮೈಸೂರು (2) ಕೋಲಾರ (3) ತುಮಕೂರು (4) ಮಂಡ್ಯ (5) ಹಾಸನ (6) ಶಿವಮೊಗ್ಗ (7) ಮಂಗಳೂರು (8) ಬೆಳಗಾವಿ (9) ಬಾಗಲಕೋಟೆ (10) ಕಾರವಾರ (11) ಬಳ್ಳಾರಿ (12) ಬೀದರ್ – ಇವುಗಳನ್ನು ಗುರುತಿಸಲಾಗಿದೆ.

ಈ ಹನ್ನೆರಡು (12) ಜಿಲ್ಲೆಗಳ ಮೂವತ್ತೊಂದು (31) ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಕಲಿಕಾ ಅನುಜ್ಞಾ ಪತ್ರ, ಚಾಲನಾ ಅನುಜ್ಞಾ ಪತ್ರ, ಮತ್ತು ವಾಹನ ನೋಂದಣಿಗೆ ಸಂಬಂಧಿಸಿದ ಅರ್ಜಿಗಳನ್ನು ಆಯಾ ಜಿಲ್ಲೆಗಳಲ್ಲಿ ದಿನಾಂಕ: 15–01–2015 ರಿಂದ ಪ್ರಾಯೋಗಿಕವಾಗಿ ಹಾಗೂ ದಿನಾಂಕ: 15–02–2015 ರಿಂದ ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಪಡೆದುಕೊಳ್ಳಲು ಸರ್ಕಾರಿ ಆದೇಶ ಸಂಖ್ಯೆ: ಸಾರಿಇ 113 ಸಾಇಪ 2013, ಬೆಂಗಳೂರು ದಿನಾಂಕ: 08–01–2015 ರಲ್ಲಿ ಮಂಜೂರಾತಿ ನೀಡಲಾಗಿರುತ್ತದೆ. **ಆದುದರಿಂದ, ಸದರಿ ಜಿಲ್ಲೆಗಳಲ್ಲಿನ ನಾಗರಿಕರು (ವ್ಯಾಪ್ತಿರಹಿತವಾಗಿ) ತಮ್ಮ ಜಿಲ್ಲೆಯ ಯಾವುದೇ ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ "ಕಲಿಕಾ ಪರವಾನಗಿ", "ಹೊಸ ಚಾಲನಾ ಪರವಾನಗಿ" ಮತ್ತು "ಹೊಸ ವಾಹನ ನೋಂದಣಿ"ಗಾಗಿ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಬಹುದು.**

ರಾಜ್ಯದ ಇನ್ನುಳಿದ ಹದಿನೇಳು (17) ಜಿಲ್ಲೆಗಳಾದ (1) ಚಿಕ್ಕಬಳ್ಳಾಪುರ (2) ಚಾಮರಾಜನಗರ (3) ಮಡಿಕೇರಿ (4) ಉಡುಪಿ (5) ಚಿಕ್ಕಮಗಳೂರು (6) ಚಿತ್ರದುರ್ಗ (7) ದಾವಣಗೆರೆ (8) ಧಾರವಾಡ (9) ಗದಗ (10) ಹಾವೇರಿ (11) ವಿಜಯಪುರ (12) ಕಲಬುರಗಿ (13) ಯಾದಗಿರಿ (14) ರಾಯಚೂರು (15) ಕೊಪ್ಪಳ (16) ರಾಮನಗರ (17) ಬೆಂಗಳೂರು ಗ್ರಾಮಾಂತರ ಇವುಗಳಲ್ಲಿನ ಪ್ರಾದೇಶಿಕ/ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಕಲಿಕಾ ಅನುಜ್ಞಾ ಪತ್ರ, ಚಾಲನಾ ಅನುಜ್ಞಾ ಪತ್ರ ಮತ್ತು ವಾಹನ ನೋಂದಣಿಗೆ ಸಂಬಂಧಿಸಿದ ಅರ್ಜಿಗಳನ್ನು ದಿನಾಂಕ: 15–02–2015 ರಿಂದ ಪ್ರಾಯೋಗಿಕವಾಗಿ ಹಾಗೂ ದಿನಾಂಕ: 15–03–2015 ರಿಂದ ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಪಡೆದುಕೊಳ್ಳಲು ಸಹ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿರುತ್ತದೆ. **ಆದುದರಿಂದ, ಸದರಿ ಜಿಲ್ಲೆಗಳಲ್ಲಿನ ನಾಗರಿಕರು ತಮ್ಮ ಜಿಲ್ಲೆಯ ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ "ಕಲಿಕಾ ಪರವಾನಗಿ", "ಹೊಸ ಚಾಲನಾ ಪರವಾನಗಿ" ಮತ್ತು "ಹೊಸ ವಾಹನ ನೋಂದಣಿ"ಗಾಗಿ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಬಹುದು.**

**(ಅ) ನಾಗರಿಕರು ಈ ಕೆಳಕಂಡ ವೆಬ್‌ಸೈಟ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.**

**ವೆಬ್‌ಸೈಟ್: www.rto.kar.nic.in**

**(ಬ) ಕರ್ನಾಟಕ ಮೊಬೈಲ್ ಒನ್ ಮೂಲಕ ಸಹ ಮೊಬೈಲ್ ಆ್ಯಪ್ ಬಳಸಿ ಅನ್‌ಲೈನ್ ಮೂಲಕ ಎಲ್‌ಎಲ್ ಮತ್ತು ಡಿಎಲ್ ಗಾಗಿ ಅರ್ಜಿ ಸಲ್ಲಿಸಬಹುದು. ಮೊಬೈಲ್ ಆ್ಯಪ್ ಡೌನ್ ಲೋಡ್ ಮಾಡಲು 1800–425–425–425 ಗೆ ಮಿಸ್ಡ್ ಕಾಲ್ ನೀಡಿ.**

**ಹೆಚ್ಚಿನ ಮಾಹಿತಿಗಾಗಿ ಮತ್ತು ಸಹಾಯಕ್ಕಾಗಿ ಸಂಬಂಧಪಟ್ಟ ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಯನ್ನು ಸಂಪರ್ಕಿಸಬಹುದೆಂದು** ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಆಯುಕ್ತರು ತಿಳಿಸಿದ್ದಾರೆ.

ಬಾಬು/ಸೌಮ್ಯ/ಕೆಎಂ

## Transport Department: Online Services

**Bangalore, January 20 (Karnataka Information)**

In para No.454 of the State Budget for the current year 2014-15, it has been declared thus – “For the convenience of the public, it is proposed to provide online services of receiving and attending to applications for registration of vehicles, learning and driving licences in any of the offices in the districts having more than one Regional Transport Offices’’. Excluding Bangalore City and Rural Districts wherein these online services have been implemented during October 2013, the twelve (12) districts viz., (1) Mysuru (2) Kolar (3) Tumakuru (4) Mandya (5) Hassan (6) Shivamogga (7) Mangaluru (8) Belagavi (9) Bagalkote (10) Karwar (11) Ballari (12) Bidar are identified as having more than one Regional / Assistant Regional Transport Offices.

In the Government Order No. ಸಾರಿಇ 113 ಸಾಇಪ 2013 dated 08.01.2015, the Government has accorded sanction to receive the applications for learning licence, driving licence and registration of vehicles through online on experimental basis with effect from 15.01.2015 and mandatorily with effect from 15.02.2015 in the thirty one (31) Regional / Assistant Regional Transport Offices of these tweleve (12) districts. **Therefore, the citizens in these districts can apply (irrespective of jurisdiction) through online for “learner’s licence,’’ “new driving licence’’ and “new vehicle registration’’ in any of the Regional / Assistant Regional Transport Office of their respective district**.

The Government has also accorded sanction to receive the applications for learning licence, driving licence and registration of vehicles through online on experimental basis with effect from 15.02.2015 and mandatorily with effect from 15.03.2015 in the Regional / Assistant Regional Transport Offices of the remaining seventeen (17) districts of the State viz., (1) Chikkaballapura (2) Chamarajanagar (3) Madikeri (4) Udupi (5) Chikkamagaluru (6) Chitradurga (7) Davangere

(8) Dharwad (9) Gadag (10) Haveri (11) Vijayapura (12) Kalaburagi (13) Yadagiri (14) Raichur (15) Koppal (16) Ramanagar (17) Bengaluru Rural. **Therefore, the citizens in these districts can apply through online for "learner's licence," "new driving licence" and "new vehicle registration" in the Regional / Assistant Regional Transport Office of their respective district.**

**(a) Citizens can apply through the following website**
**Website: www.rto.kar.nic.in**

**(b) Citizens can also apply online for LL and DL Using mobile App through Karnataka Mobile One. To download App give a missed call to 1800-425-425-425**

**For more details and help, please contact respective Regional / Assistant Regional Transport Office**.

ಬಾಬು/ಸೌಮ್ಯ/ಕೆಎಂ

## ನೇರ ಫೋನ್‌ಇನ್ ಕಾರ್ಯಕ್ರಮ

**ಬೆಂಗಳೂರು, ಜನವರಿ 20 (ಕರ್ನಾಟಕ ವಾರ್ತೆ)**

ದೂರದರ್ಶನ ಚಂದನವಾಹಿನಿಯಲ್ಲಿ ಜನವರಿ 21 ರಂದು ಬೆಳಿಗ್ಗೆ 8–00 ಗಂಟಗೆ ಕುಡಿಯುವ ನೀರು, ಶೌಚಾಲಯ ಹಾಗೂ ಸ್ವಚ್ಛಭಾರತ ಅಭಿಯಾನ ಕುರಿತ ನೇರ ಫೋನ್‌ಇನ್ ಕಾರ್ಯಕ್ರಮದಲ್ಲಿ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಶ್ರೀ ಹೆಚ್.ಕೆ. ಪಾಟೀಲ್ ಅವರು ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ. ಸಾರ್ವಜನಿಕರು ದೂರವಾಣಿ 080– 23542599, 080, 23542699 ಕ್ಕೆ ನೇರ ಕರೆ ಮಾಡಬಹುದಾಗಿದೆ.

ಛಾಯಾಚಿತ್ರ ಶೀರ್ಷಿಕೆ: 4406

ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರು ಇಂದು ಬಳ್ಳಾರಿ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್ ಘೋಷಿಸಿದರು. ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಶ್ರೀ ರಾಮಚಂದ್ರಪ್ಪ ಅವರು ಚಿತ್ರದಲ್ಲಿದ್ದಾರೆ.